# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ

## ಸ್ಪೆಷಲ್ ಕೇಸ್ ನಂ. 8/2014

ಫಿರ್ಯಾದಿ – ಸರ್ಕಾರ – ಕಾರವಾರ ಲೋಕಾಯುಕ್ತ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ – ನರೇಂದ್ರ ಗೋವಿಂದ್ರಾಯ ಹಿತ್ತಲಮಕ್ಕಿ

## ದೋಷಾರೋಪಣೆ

ಶ್ರೀ ಸಿ.ರಾಜಶೇಖರ, ಬಿ.ಕಾಂ. ಎಲ್.ಎಲ್.ಬಿ., ಪ್ರಧಾನ ಜಿಲ್ಲಾ ಮತ್ತು ನ್ಯಾಯಾಧೀಶರು, ಉತ್ತರ ಕನ್ನಡ , ಕಾರವಾರ ಆದ ನಾನು

ನರೇಂದ್ರ ಗೋವಿಂದ್ರಾಯ ಹಿತ್ತಲಮಕ್ಕಿ,
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು,
ಅಂಕೋಲಾ ಉಪವಿಭಾಗ, ಅಂಕೋಲಾ.
ಹಾಲಿಃ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು,
ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆ, ಎಪಿಎಂಸಿ ರಸ್ತೆ, ಚಿತ್ರದುರ್ಗ
ಸಾಃ ಮನೆ ನಂ.95, "ಮಾನಸಿ", ವಂದಿಗೆ ಗ್ರಾಮ, ತಾಃಅಂಕೋಲಾ .

ನಿಮ್ಮ ವಿರುದ್ಧ ಆಪಾದಿಸುವುದೇನೆಂದರೆಃ

ಮೊದಲನೇಯದಾಗಿ, ದಿನಾಂಕಃ 27.11.1980 ರಂದು ವಲಯ ಅರಣ್ಯಾಧಿಕಾರಿಯಾಗಿ ಸರ್ಕಾರಿ ಸೇವೆಗೆ ಸೇರಿದ್ದ ಆರೋಪಿಯಾದ ನೀವು ತಮಿಳುನಾಡು ರಾಜ್ಯದ ಕೊಯಮತ್ತೂರಿನಲ್ಲಿ ತರಬೇತಿ ಪಡೆದು, ನಂತರ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ, ಸಿದ್ದಾಪುರ, ಕತಗಾಲ ಮತ್ತು ಶಿವಮೊಗ್ಗ ಜಿಲ್ಲೆಯ ಆನಂದಪುರಂನಲ್ಲಿ ಸೇವೆ ಸಲ್ಲಿಸಿ , ದಿನಾಂಕಃ 22.07.2000 ರಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಪದೋನ್ನತಿ ಹೊಂದಿ ಜಮಖಂಡಿ, ಕಾರವಾರ, ಬೆಳಗಾವಿ ಹಾಗೂ ಅಂಕೋಲಾ ಉಪ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸಿದ್ದು, ಆರೋಪಿಯಾದ ನೀವು ನಿಮ್ಮ ಸೇವಾ ಅವಧಿಯಲ್ಲಿ ಭೃಷ್ಟಾಚಾರ ಹಾಗೂ

ಲಂಚಗುಳಿತನಕ್ಕೆ ಒಳಪಟ್ಟು, ನಿಮ್ಮ ನ್ಯಾಯ ಸಮ್ಮತ ಆದಾಯಕ್ಕಿಂತ ಅಧಿಕ ಮೌಲ್ಯದ ಆಸ್ತಿ ಮತ್ತು ಸ್ವತ್ತುಗಳನ್ನು ಹೊಂದಿರುವ ಬಗ್ಗೆ ಫಿರ್ಯಾದಿ ಚಾಸಾ.84 ಶ್ರೀ ಆರ್.ವಿ.ಗಂಗಾಧರಪ್ಪ, ಪೋಲೀಸ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಇವರು ಸಂಗ್ರಹಿಸಿದ ಖಚಿತ ಮಾಹಿತಿಯ ಮೇರೆಗೆ ಚಾಸಾ.1 ಎಸ್.ಇ.ಡಿಸೋಜಾ, ಪೋಲೀಸ್ ಅಧೀಕ್ಷಕರು, ಇವರು ಸರಕಾರದ ಪರವಾಗಿ ದೂರನ್ನು ದಾಖಲಿಸಿ ತನಿಖೆ ಕೈಗೊಂಡು , ದಿನಾಂಕಃ 27.11.1981 ರಿಂದ 30.04.2010 ರ ವರೆಗಿನ ಪರಿಶೀಲನಾ ಅವಧಿಯಲ್ಲಿ ಆರೋಪಿಯಾದ ನೀವು , ನಿಮ್ಮ ಮತ್ತು ನಿಮ್ಮ ಪತ್ನಿ ಮತ್ತು ಮಕ್ಕಳ ಹೆಸರಿನಲ್ಲಿ ಸಂಪಾದಿಸಿದ ಆಸ್ತಿ , ಪಡೆದ ಆದಾಯ ಮತ್ತು ಮಾಡಲಾದ ಖರ್ಚುಗಳ ಬಗ್ಗೆ ಸಂಗ್ರಹಿಸಿದ ದಾಖಲೆಗಳಿಂದ ನೀವು ಶೇಕಡಾ 100.02 ರಷ್ಟು (ರೂ.95,62,945/-) ನ್ಯಾಯ ಸಮ್ಮತ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಮತ್ತು ಅಕ್ರಮ ಸ್ವತ್ತುಗಳನ್ನು ಹೊಂದಿರುವುದು ದೃಢಪಟ್ಟಿದ್ದು , ಈ ಮೂಲಕ ನೀವು ಲಂಚ ಪ್ರತಿಬಂಧಕ ಕಾಯ್ದೆ 1988 ಕಲಂ 13(1)(ಇ) ಜೊತೆ ಕಲಂ 13(2) ರ ಮೇರೆಗೆ ದಂಡನೀಯವಾದ ಅಪರಾಧವನ್ನು ಈ ವಿಶೇಷ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುವಿರಿ.

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ..

ದಿನಾಂಕಃ 26 ನೇ ಫೆಬ್ರುವರಿ 2021.

(ಸಿ. ರಾಜಶೇಖರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

ಫಿರ್ಯಾದಿ – ಸರ್ಕಾರ – ಕಾರವಾರ ಲೋಕಾಯುಕ್ತ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ – ನರೇಂದ್ರ ಗೋವಿಂಧ್ರಾಯ ಹಿತ್ತಲಮಕ್ಕಿ

**ದೋಷಾರೋಪಣೆ**

ಆರೋಪಿಯ ಹೆಸರು – ನರೇಂದ್ರ

ತಂದೆಯ ಹೆಸರು – ಗೋವಿಂಧ್ರಾಯ ಹಿತ್ತಲಮಕ್ಕಿ

ವಯಸ್ಸು – ವರ್ಷ

ಉದ್ಯೋಗ – ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಅಂಕೋಲಾ ಉಪವಿಭಾಗ. ಹಾಲಿಃ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆ,ಎಪಿಎಂಸಿ ರಸ್ತೆ, ಚಿತ್ರದುರ್ಗ.

ವಾಸ – ಮನೆ ನಂ.95, "ಮಾನಸಿ", ವಂದಿಗೆ ಗ್ರಾಮ ಅಂಕೋಲಾ .

**ಆರೋಪಿಯ ಹೇಳಿಕೆ**

ಪ್ರಶ್ನೆಃ ನಿಮ್ಮ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿಮಗೆ ತಿಳಿಯಿತೆ?
ಉತ್ತರಃ

ಪ್ರಶ್ನೆಃ ನೀವು ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತಿರಾ?
ಉತ್ತರಃ

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು..

ದಿನಾಂಕಃ 26 ನೇ ಫೆಬ್ರುವರಿ 2021

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ .